# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **878** |
| ಸದಸ್ಯರ ಹೆಸರು | : | ಶ್ರೀ ಹೆಚ್. ಎಸ್. ಗೋಪಿನಾಥ್<br>(ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16-12-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೃಷಿ, ಗೃಹ, ಬೋರ್‌ವೆಲ್ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಇತರೆ ಉಪಯೋಗಗಳಿಗೆ ಹೊಸದಾಗಿ ವಿದ್ಯುತ್ ಸಂಪರ್ಕ ನೀಡಲು ಇರುವ ಮಾನದಂಡಗಳೇನು; | ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಹೊರಡಿಸಿರುವ Conditions of Supply of Electricity of Distribution Licensees in the State of Karnataka ನಿಯಮಾವಳಿಯನುಸಾರ ಕೃಷಿ, ಗೃಹ, ಬೋರ್‌ವೆಲ್ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಹೊಸ ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ.<br><br>ಕೃಷಿ ಮತ್ತು ಬೋರ್ ವೆಲ್ ಅರ್ಜಿಗಳಿಗೆ ಷರತ್ತು 6.00ರ ಅಡಿಯಲ್ಲಿ, ನಿರ್ದಿಷ್ಟ ದಾಖಲೆಗಳಾದ ಜಲ ಹಕ್ಕು ಪ್ರಮಾಣಪತ್ರ, ಹಕ್ಕುಗಳ ದಾಖಲೆ ಮತ್ತು ನಿರಾಕ್ಷೇಪಣಾ ಪತ್ರವನ್ನು ನೀರಾವರಿ ಇಲಾಖೆ/ ಕಂದಾಯ/ ಲೋಕೋಪಯೋಗಿ ಇಲಾಖಾವತಿಯಿಂದ (ನದಿ, ನಾಲೆ ಅಥವಾ ಕಾಲುವೆಗಳಿಂದ ನೀರು ಉಪಯೋಗಿಸಿದ್ದಲ್ಲಿ) ಪಡೆದು ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುತ್ತಿದೆ.<br><br>ಗೃಹ ಮತ್ತು ವಾಣಿಜ್ಯ ಸ್ಥಾವರಗಳಿಗೆ ನಿಯಮಾವಳಿ/ ಷರತ್ತು 4.00 & 5.00 ಅಡಿಯಲ್ಲಿ ನಿರ್ಧಿಷ್ಟ ದಾಖಲೆಗಳಾದ ಆವರಣದ ಮಾಲೀಕತ್ವ/ ಸ್ಥಳೀಯ ಅಧಿಕಾರಿಗಳಿಂದ ಪಡೆದ ಪರವಾನಿಗೆ/ ಪಾಲುದಾರಿಕೆ ದಾಖಲೆಗಳು/ ಅರ್ಜಿದಾರನು ಮಾಲೀಕರಲ್ಲದಿದ್ದರೇ ಬಾಡಿಗೆ ಕರಾರು ಮತ್ತು Indeminity Bond ಪಡೆದು ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ. |
| ಆ) | ಕೃಷಿ/ಗೃಹ/ವಾಣಿಜ್ಯ ವಿಭಾಗದ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೈಗೊಳ್ಳಲು ಇರುವ ಮಾರ್ಗಸೂಚಿಗಳಾವುವು; | ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ Standards of Performance regulations-2022 ರ schedule-1 ರ ಕ್ರಮ ಸಂಖ್ಯೆ-3 ಅನ್ವಯ ವಿಫಲವಾದ ಪರಿವರ್ತಕಗಳನ್ನು ನಗರ ಪ್ರದೇಶಗಳಲ್ಲಿ 24 ಗಂಟೆಯೊಳಗೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 72 ಗಂಟೆಯೊಳಗೆ ಬದಲಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮುಂದುವರೆದು, ವಿಫಲವಾದ ಪರಿವರ್ತಕಗಳನ್ನು ಶೀಘ್ರವಾಗಿ ಬದಲಾಯಿಸಲು ದುರಸ್ಥಿ ಕೇಂದ್ರಗಳನ್ನು ತಾಲ್ಲೂಕುವಾರು ಸ್ಥಾಪಿಸಲಾಗಿದ್ದು ದರ ಗುತ್ತಿಗೆ ಆಧಾರದಡಿ ಕಾರ್ಯಪ್ರೇಪಣೆ ನೀಡಲಾಗುವುದು. ವಿಫಲಗೊಂಡ ಪರಿವರ್ತಕಗಳನ್ನು ಪಡೆದ ದುರಸ್ಥಿದಾರರು ಕಾರ್ಯಪ್ರೇಕ್ಷಣೆಯಲ್ಲಿ ತಿಳಿಸಿದ ಕಾಲಮಿತಿಯಲ್ಲಿ ದುರಸ್ಥಿಗೊಳಿಸಿ ಹಿಂದಿರುಗಿಸಬೇಕಾಗಿರುತ್ತದೆ. ಹಾಗೂ ವಿಭಾಗೀಯ ಉಗ್ರಾಣದಲ್ಲಿಯೂ ಸಹ ಪರಿವರ್ತಕಗಳನ್ನು ದಾಸ್ತಾನು ಇರಿಸಲಾಗಿರುತ್ತದೆ. |

<table>
<tr>
<td></td>
<td></td>
<td>
ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಪರಿವರ್ತಕ ತಯಾರಿಕರಿಂದ ಪರಿವರ್ತಕಗಳನ್ನು ಖರೀದಿಸಲಾಗುತ್ತಿದ್ದು, ವಿಳಂಬವಾಗದಂತೆ ಆದ್ಯತೆಯ ಮೇರೆಗೆ ಬದಲಾಯಿಸಲಾಗುತ್ತಿದೆ.
ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲು ವಿದ್ಯುತ್ ಸರಬರಾಜು ಕಂಪನಿವಾರು ದುರಸ್ತಿ ಕೇಂದ್ರಗಳನ್ನು ಮತ್ತು ಟ್ರಾನ್ಸ್‌ಫಾರ್ಮರ್ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗಿರುತ್ತದೆ. ಅವುಗಳ ವಿವರಗಳು ಕೆಳಗಿನಂತಿವೆ:
<table>
<tr><th>ಕಂಪನಿ</th><th>ಪರಿವರ್ತಕ ದುರಸ್ತಿ ಕೇಂದ್ರಗಳ ಸಂಖ್ಯೆ</th><th>ಟ್ರಾನ್ಸ್‌ಫಾರ್ಮರ್ ಬ್ಯಾಂಕ್‌ಗಳ ಸಂಖ್ಯೆ</th></tr>
<tr><td>ಬೆಸ್ಕಾಂ</td><td>50</td><td>49</td></tr>
<tr><td>ಮೆಸ್ಕಾಂ</td><td>14</td><td>14</td></tr>
<tr><td>ಸೆಸ್ಕ್</td><td>26</td><td>52</td></tr>
<tr><td>ಹೆಸ್ಕಾಂ</td><td>55</td><td>26</td></tr>
<tr><td>ಜೆಸ್ಕಾಂ</td><td>37</td><td>17</td></tr>
<tr><td>ಒಟ್ಟು</td><td>182</td><td>158</td></tr>
</table>
</td>
</tr>
<tr>
<td>ಇ)</td>
<td>ಟ್ರಾನ್ಸ್‌ಫಾರ್ಮರ್ ದುರಸ್ತಿಗೊಳಿಸಲು ರೈತರಿಂದ ಹಣ ಪಡೆಯುತ್ತಿರುವ ಬಗ್ಗೆ ಎಷ್ಟು ದೂರುಗಳು ಸ್ವೀಕೃತವಾಗಿವೆ; (ತಾಲ್ಲೂಕು ವಾರು ಮಾಹಿತಿ ನೀಡುವುದು)</td>
<td>ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿಗೊಳಿಸಲು ರೈತರಿಂದ ಹಣ ಪಡೆದಿರುವ ಬಗ್ಗೆ ಯಾವುದೇ ದೂರುಗಳು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸ್ವೀಕೃತವಾಗಿರುವುದಿಲ್ಲ.</td>
</tr>
<tr>
<td>ಈ)</td>
<td>ಗೃಹಲಕ್ಷ್ಮಿ ಯೋಜನೆಯಡಿ ಎಷ್ಟು ಫಲಾನುಭವಿಗಳು ಆಯ್ಕೆಯಾಗಿದ್ದಾರೆ; ಮತ್ತು ಉಚಿತ ವಿದ್ಯುತ್ ಬಿಲ್ ಮೊತ್ತವನ್ನು ಸರ್ಕಾರಕ್ಕೆ ಎಷ್ಟು ಪಾವತಿಸಲಾಗಿದೆ? (ವಿವರ ನೀಡುವುದು)</td>
<td>
ಗೃಹ ಜ್ಯೋತಿ ಯೋಜನೆಯಡಿ ಅಕ್ಟೋಬರ್-2024 ರ ಅಂತ್ಯಕ್ಕೆ ಫಲಾನುಭವಿಗಳ ಸಂಖ್ಯೆಯ ಮತ್ತು ಸರ್ಕಾರದಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆಯಾಗಿರುವ ಒಟ್ಟು ಸಹಾಯಧನ ಮೊತ್ತದ ವಿವರಗಳು ಕೆಳಗಿನಂತಿವೆ:
<table>
<tr><th></th><th>ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಸಂಖ್ಯೆ</th><th>ಸರ್ಕಾರದಿಂದ ಬಿಡುಗಡೆಯಾದ ಸಹಾಯಧನದ ಮೊತ್ತ (ರೂ.ಕೋಟಿಗಳಲ್ಲಿ)</th></tr>
<tr><td>ಒಟ್ಟು</td><td>1,61,90,130</td><td>10994.32</td></tr>
</table>
</td>
</tr>
</table>

ಸಂಖ್ಯೆ: ಎನರ್ಜಿ 343 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು